ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1564/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಕುರುಬರ ಕುಮಾರ ಸ್ವಾಮಿ** | | |
| **ತಂದೆ:ಹೆಸರು** | **ಹೊನ್ನೂರಪ್ಪ** | **ಪಿಡಬ್ಲೂ:** | **07** |
| **ವಯಸ್ಸು** | **58 ವರ್ಷ** | **ಸಿಡಬ್ಲೂ:** | **20** |
| **ಉದ್ಯೋಗ:** | **ಪಿ ಎಸ್ ಐ** | | |
| **ವಾಸ ಸ್ಥಳ:** | **ಅಚ್ಕೋಳ್ಳಿ ಪೋಲೀಸ್ ಠಾಣೆ, ಸಿರುಗುಪ್ಪ.** | | |

**ದಿನಾಂಕ 14-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ನಾನು 2023 ರಿಂದ 2024 ರವರೆಗೆ ಸಿಂಧನೂರು ಸಂಚಾರಿ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ:19.12.2023 ರಂದು ಸಂ. 5 ಗಂಟೆಗೆ ನಾನು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ದೂರುದಾರರು ಠಾಣೆಗೆ ಹಾಜರಾಗಿ, ಕನ್ನಡದ ಗಣಕೀಕೃತ ದೂರನ್ನು ತಂದು ಹಾಜರುಪಡಿಸಿದ್ದು, ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ 64/2023 ಪ್ರಕರಣವನ್ನು ಕಲಂ.279, 304(ಎ) ಭಾ.ದಂ.ಸಂ. ಅಡಿಯಲ್ಲಿ ದಾಖಲಿಸಿ ಪ್ರಥಮ ವರ್ತಮಾನ

ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.16, ಸಾಕ್ಷಿಯ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು.

ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿ, ನಿಪಿ-3 & 4 ನ್ನು ತೆಗೆದು, ಅದೇ ದಿನ ಸಂ.5-30 ರಿಂದ 6 ಗಂಟೆಯವರೆಗೆ ಜಪ್ತು ಪಂಚರ ಸಮಕ್ಷಮ ನಿಪಿ-9 ರಂತೆ ವಾಹನಗಳ ಜಪ್ತು ಪಂಚನಾಮೆ ಮಾಡಿರುತ್ತೇನೆ. ಸಾಕ್ಷಿಯ ಸಹಿಗಳನ್ನು ನಿಪಿ-2 ಡಿ & 9 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-10, 11 ನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಚಾಸಾ-10, 13, 14 ರವರ ಹೇಳಿಕೆ ಪಡೆದಿರುತ್ತೇನೆ.

ದಿ.27-12-2023 ರಂದು ಚಾಸಾ-15 ರವರ ಹೇಳಿಕೆ ಪಡೆದಿರುತ್ತೇನೆ.

ದಿ.09-01-2024 ರಂದು ಸಂ.5 ರಿಂದ 6 ಗಂಟೆಯವರೆಗೆ ಜಪ್ತು ಪಂಚರ ಸಮಕ್ಷಮ ಟ್ರಾಕ್ಟರ್ ತಡೆ ಪಂಚನಾಮೆ ಮಾಡಿ, ನಿಪಿ-13 & 14 ನ್ನು ತೆಗೆದಿರುತ್ತೇನೆ. ನಿಪಿ-12 ರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.12(ಸಿ) ಎಂದು ಗುರುತಿಸಲಾಯಿತು. ನಂತರ ಚಾಸಾ-19 ರವರನ್ನು ಮೃತರ ಶವ ಪಂಚನಾಮೆ ಮಾಡಿಕೊಂಡು ಬರಲು ಕಳಿಸಿದ್ದೆ. ನಂತರ ನ್ಯಾಯಾಲಯಕ್ಕೆ 2 ಸ್ವತ್ತುಪಟ್ಟಿಗಳನ್ನು ನಮ್ಮ ಸಿಬ್ಬಂದಿಯ ಮುಖಾಂತರ ಕಳಿಸಿರುತ್ತೇನೆ. 2 ಸ್ವತ್ತುಪಟ್ಟಿಗಳನ್ನು ನಿಪಿ-17 & 18 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ.17(ಎ) & 18(ಎ) ಎಂದು ಗುರುತಿಸಲಾಯಿತು. ಚಾಸಾ-14 ರವರ ಮರು ಹೇಳಿಕೆ ಪಡೆದಿರುತ್ತೇನೆ.

ಶವ ಪಂಚನಾಮೆಯ ಕಾಲಕ್ಕೆ ಚಾಸಾ-19 ರವರು ಶವ ಪಂಚರ ಹೇಳಿಕೆಗಳನ್ನು ಪಡೆದಿದ್ದರು. ದಿ.16-02-2024 ರಂದು ಚಾಸಾ-1, 8 ರಿಂದ 10 ರವರ ಮರು ಹೇಳಿಕೆ ಪಡೆದಿರುತ್ತೇನೆ. ಚಾಸಾ-11, 12 ರವರ ಹೇಳಿಕೆ ಪಡೆದಿರುತ್ತೇನೆ.

ದಿ.08-02-2024 ರಂದು ಕರಿಯಪ್ಪ, ಸಿಪಿಸಿ ರವರು ಟ್ರಾಲಿ ಮಾಲೀಕರ ಬಗ್ಗೆ ವಿಚಾರಣೆ ಮಾಡಿ, ಅಂತಹ ಹೆಸರಿನ ವ್ಯಕ್ತಿ ಯಾರೂ ಇರುವುದಿಲ್ಲ ಎಂದು ವರದಿ ನೀಡಿದ್ದು, ನನ್ನ ಸಿಬ್ಬಂದಿ ಮಹೇಶ್ ಸಿಪಿಸಿ ರವರೂ ಸಹ ಆ ವ್ಯಕ್ತಿಯ ಬಗ್ಗೆ ವಿಚಾರಿಸಿ, ಆ ವ್ಯಕ್ತಿ ಯಾರೂ ಇರುವುದಿಲ್ಲ, ಅವರ ಹೆಸರಿನಲ್ಲಿ ಯಾವುದೇ ಆಸ್ತಿ ನೊಂದಣೆ ಇರುವುದಿಲ್ಲ ಎಂದು ವರದಿಗಳನ್ನು ನೀಡಿದ್ದರು. ಸದರಿ ವರದಿಗಳನ್ನು ನಿಪಿ-19 & 20 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-19 ಎ & 20(ಎ) ಎಂದು ಗುರುತಿಸಲಾಯಿತು. ಅದೇ ರೀತಿಯಾಗಿ ಗ್ರಾಮಪಂಚಾಯಿತಿ ರವರಿಗೆ ಅರ್ಜಿ ಬರೆದು, ವರದಿಯನ್ನು

ದಿ.07-03-2024 ರಂದು ಪಡೆದಿದ್ದೆ. ಸದರಿ ವರದಿಯನ್ನು ನಿಪಿ-21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21 ಎ ಎಂದು ಗುರುತಿಸಲಾಯಿತು.

ದಿ.08-02-2024 ರಂದು ಟ್ರಾಕ್ಟರ್ & ಟ್ರಾಲಿಯ ಮೂಲ ಮಾಲೀಕರ ಅಬ್ಸ್ರಾಕ್ಟ್ & ಮಾಲೀಕರ ವಿವಿರವಾದ ಮಾಹಿತಿ ಕೋರಿ ಮನವಿ ಸಲ್ಲಿಸಿದ್ದು, ಅದರಂತೆ ಸದರಿಯವರು ವಾಹನದ ದಾಖಲೆಗಳನ್ನು ನೀಡಿದ್ದರು. ಸಾಕ್ಷಿಯು ಸದರಿ ಮನವಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-22 ಎಂದು, ವಾಹನದ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ-23 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-23 ಎ ಎಂದು ಗುರುತಿಸಲಾಯಿತು.

ನಂತರ ವೈದ್ಯರಿಗೆ ಪಿ ಎಂ ಮಾಡಲು ಮನವಿ ಸಲ್ಲಿಸಿದ್ದು, ಸದರಿಯವರು ವರದಿ ಕೊಟ್ಟಿದ್ದರು. ಸಾಕ್ಷಿಯು ಪಿ ಎಂ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-24 ಎಂದು, ಸಾಕ್ಷಿಯ ಸಹಿಯನ್ನು ನಿಪಿ-24 ಎ ಎಂದು ಗುರುತಿಸಲಾಯಿತು.

ದಿ.27-01-2024 ರಂದು ಎಫ್ ಎಸ್ ಎಲ್ ಗೆ ರಕ್ತದ ಮಾದರಿಯನ್ನು ಕಳಿಸಿರುತ್ತೇನೆ. ಅದರಂತೆ ಅವರು ದಿ.06-02-2024 ರಂದು 2 ಎಫ್ ಎಸ್ ಎಲ್ ವರದಿ ಪಡೆದಿರುತ್ತೇನೆ. ಸದರಿ ವರದಿಗಳನ್ನು ನಿಪಿ-25 & 26 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-25 ಎ & 26 ಎ ಎಂದು ಗುರುತಿಸಲಾಯಿತು.

ದಿ.02-03-2024 ರಂದು ಐಎಂವಿ ವರದಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-27 ಎಂದು, ಸಾಕ್ಷಿಯ ಸಹಿಯನ್ನು ನಿಪಿ-27 ಎ ಎಂದು ಗುರುತಿಸಲಾಯಿತು.

ದಿ.10-01-2024 ರಂದು ಸ್ವರಾಜ್ ಟ್ರಾಕ್ಟರ್‌ನ ಮಾಲೀಕರಿಗೆ ಕಲಂ.133 ನೋಟೀಸು ಕೊಟ್ಟು, ಉತ್ತರ ಪಡೆದು, ವಾಹನದ ದಾಖಲೆಗಳನ್ನು ಪಡೆದು, ಮುಚ್ಚಳಿಕೆ ಪತ್ರ ಬರೆಸಿಕೊಂಡು ಸದರಿ ವಾಹನವನ್ನು ಚಾಸಾ-11 ರವರ ತಾಬಾಕ್ಕೆ ಬಿಡುಗಡೆ ಮಾಡಿರುತ್ತೇನೆ. ನೋಟೀಸನ್ನು ನಿಪಿ-28 ಎಂದು, ಉತ್ತರವನ್ನು ನಿಪಿ-29 ಎಂದು, ಮುಚ್ಚಳಿಕೆ ಪತ್ರವನ್ನು ನಿಪಿ-30 ಎಂದು, ವಾಹನದ ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ-31 ಎಂದು, ನಿಪಿ-28 ರಿಂದ 31 ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-28 ಎ ಯಿಂದ 31 ಎ, 31 ಬಿ, 31 ಸಿ, 31 ಡಿ ಎಂದು ಗುರುತಿಸಲಾಯಿತು. ನಂತರ ಜಗದೀಶ್ ರವರ ಚಾಲನ ಪರವಾನಿಗೆ ಪತ್ರವನ್ನು ಪಡೆದಿರುತ್ತೇನೆ. ಸದರಿ ಪರವಾನಿಗೆ ಪತ್ರವನ್ನು ನಿಪಿ-32 ಎಂದು, ಸಾಕ್ಷಿಯ ಸಹಿಯನ್ನು ನಿಪಿ-32 ಎ ಎಂದು ಗುರುತಿಸಲಾಯಿತು. ನಂತರ ಆರೋಪಿಯ ಚಾಲನಾ ಪರವಾನಿಗೆ & ಆಧಾರ ಕಾರ್ಡಿನ ಪ್ರತಿಗಳನ್ನು ಪಡೆದು, ಆತನ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ಆರೋಪಿಯ ಚಾಲನಾ ಪರವಾನಿಗೆ & ಆಧಾರ ಕಾರ್ಡಿನ ಪ್ರತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-33, 34 ಎಂದು, ಸಾಕ್ಷಿಯ

ಸಹಿಗಳನ್ನು ನಿಪಿ-33 ಎ & 34 ಎ ಎಂದು ಗುರುತಿಸಲಾಯಿತು. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

1. ನೀವು ಯಾವುದೇ ದೂರನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸ್ಥಳಕ್ಕೆ ಭೇಟಿ ನೀಡಿಲ್ಲ, ಪಂಚನಾಮೆಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿಲ್ಲ, ಜಾಮೀನಿನ ಮೇಲೆ ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ. ಪಿ ಎಂ & ಐಎಂವಿ ವರದಿಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ದಾಖಲೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಮುಚ್ಚಳಿಕೆ ಪತ್ರ ಪಡೆದು ವಾಹನವನ್ನು ಬಿಡುಗಡೆ ಮಾಡಿಲ್ಲ, ಸ್ವತ್ತುಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಎಫ್ ಎಸ್ ಎಲ್ ವರದಿ ಪಡೆದಿಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸುಳ್ಳು ದೂರು ಪಡೆದು, ಸುಳ್ಳು ತನಿಖೆ ಮಾಡಿ, ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**